1902 (2423): ಶ್ರೀ ಹಾಲಪ್ಪ ಹೆಚ್. (ಹೊಸನಗರ) – ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಲಾನಯನ ಅಭಿವೃದ್ಧಿ (ಕೃಷಿ) ಇಲಾಖೆಗೆ ಯಾವ ಯಾವ ಯೋಜನೆಗೆ ಎಷ್ಟು ಹಣ ಮಂಜೂರಾಗಿದೆ ; (ವಿವರ ನೀಡುವುದು) ;

ಆ) ಶಿವಮೊಗ್ಗ ಜಿಲ್ಲೆಗೆ ಕಳೆದ 3 ವರ್ಷಗಳಿಂದ ವಿವಿಧ ಯೋಜನೆಗಳಿಗೆ ಮಂಜೂರಾಗಿರುವ ಹಣವೆಷ್ಟು (ತಾಲ್ಲೂಕುವಾರು, ಗ್ರಾಮವಾರು, ಯೋಜನೆವಾರು ವಿವರ ನೀಡುವುದು) ಇದಕ್ಕಾಗಿ ಖರ್ಚಾಗಿ ಉಳಿದ ಹಣವೆಷ್ಟು?

ಇ) ಸದರಿ ಯೋಜನೆಯ ಫಲಾನುಭವಿಗ ಳ ವಿಳಾಸ ಹಾಗೂ ಸರ್ವೆ ನಂಬರ್‌ಗಳೊಂದಿಗೆ ಗ್ರಾಮವಾರು (ಹೊಸನಗರ ಕ್ಷೇತ್ರವ್ಯಾಪ್ತಿ) ವಿವರ ನೀಡುವುದು;

ಈ) ಇಲಾಖೆಯಿಂದ ಕಳೆದ ಮೂರು ವರ್ಷಗಳಿಂದ ಕೈಗೊಂಡ ಕಾಮಗಾರಿಗಳ ಯೋಜನೆಗಳಾವುವು; (ವಿವರ ನೀಡುವುದು);?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು) –

ಅ) ಜಲಾನಯನ ಅಭಿವೃದ್ಧಿ ಇಲಾಖೆಯು ರಾಜ್ಯವಲಯ, ವಿದೇಶಿ ನೆರವಿನ ಯೋಜನೆ ಹಾಗೂ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಜಿಲ್ಲಾ ವಲಯ ಯೋಜನೆಗಳ ಅನುದಾನದೊಂದಿಗೆ ಜಲಾನಯನ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದ್ದು ಇವುಗಳಿಗೆ 2004–05ನೇ ಸಾಲಿನಲ್ಲಿ ಒದಗಿಸಲಾಗಿರುವ ಅನುದಾನದ ಯೋಜನೆವಾರು ವಿವರಗಳನ್ನು ಕೆಳಗೆ ನೀಡಲಾಗಿದೆ.

ಕ್ರಮ ಸಂಖ್ಯೆ	ಯೋಜನೆಯ ಹೆಸರು	ಮಂಜೂರಾದ ಮೊತ್ತ (ರೂ. ಲಕ್ಷಗಳಲ್ಲಿ)
ಅ)	ಜಲಾನಯನ ಅಭಿವೃದ್ಧಿ ಇಲಾಖೆಯಿಂದ ಅನುದಾನ ಪಡೆಯುವ ಯೋಜನೆಗಳು :–	
1.	ರಾಷ್ಟ್ರೀಯ ಜಲಾನಯನ ಅಭಿವೃದ್ಧಿ ಯೋಜನೆ (NWDPRA)	1573.44
2.	ನದಿ ಕಣಿವೆ ಯೋಜನೆ (RVP)	800.00
3.	ಉಪ್ಪು, ಕ್ಷಾರೀಯ ಮತ್ತು ನೀರು ಆವೃತ್ತ ಪ್ರದೇಶ ಅಭಿವೃದ್ಧಿ ಯೋಜನೆ	71.00
4.	ವಿಶ್ವಬ್ಯಾಂಕ್ ನೆರವಿನ ಸುಜಲಾ ಜಲಾನಯನ ಯೋಜನೆ (Sujala)	9785.42
5.	ನಬಾರ್ಡ್ ಯೋಜನೆ (NABARD)	225.00

6.	ಕವಾಡ ಯೋಜನೆ (KAVADA)	975.00
7.	ಡ್ಯಾನಿಡಾ ಯೋಜನೆ (DANIDA)	95.00
	ಒಟ್ಟು	13524.86
ಆ)	ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ಇಲಾಖೆಯಿಂದ ಅನುದಾನ ಪಡೆಯುವ ಯೋಜನೆಗಳು :-	
1.	ಬರಗಾಲ ಪ್ರದೇಶಾಭಿವೃದ್ಧಿ ಯೋಜನೆ (DPAP)	4226.09
2.	ಮರುಭೂಮಿ ಅಭಿವೃದ್ಧಿ ಯೋಜನೆ (DDP)	2740.19
3.	ಪಶ್ಚಿಮಘಟ್ಟ ಅಭಿವೃದ್ಧಿ ಯೋಜನೆ (WGDP)	1471.50
4.	ಸಮಗ್ರ ಬಂಜರುಭೂಮಿ ಅಭಿವೃದ್ಧಿ ಯೋಜನೆ (IWDP)	2225.30
5.	ಗಿರಿಜನ ಉಪಯೋಜನೆ (TSP)	10.37
6.	ವಿಶೇಷ ಘಟಕ ಯೋಜನೆ (SCP)	28.83
	ಒಟ್ಟು	10702.28
	ಮಹಾ ಮೊತ್ತ	24227.14

ಆ) ಶಿವಮೊಗ್ಗ ಜಿಲ್ಲೆಯಲ್ಲಿ 3 ವರ್ಷಗಳಲ್ಲಿ ಜಲಾನಯನ ಅಭಿವೃದ್ಧಿ ಯೋಜನೆಗಳಿಗೆ ಮಂಜೂರಾಗಿರುವ ಅನುದಾನದ ವಿವರಗಳು ಕೆಳಕಂಡಂತಿದೆ.

(ಆರ್ಥಿಕ ಲಕ್ಷ ರೂ. ಗಳಲ್ಲಿ)

ಕ್ರ.ಸಂ	ಯೋಜನೆ ಹೆಸರು	ಜಿಲ್ಲೆಯ ಒಟ್ಟು ಅನುದಾನ		
		ಮಂಜೂರಾದ ಹಣ	ವೆಚ್ಚವಾದ ಹಣ	ಉಳಿಕೆ ಹಣ
1	ರಾ.ಜ.ಅ.ಯೋ	89.94	85.28	4.66
2	ರೆಕ್ಲಮೇಷನ್	35.56	35.56	0
3	ವಿ.ಘ.ಯೋ	2.63	2.63	0
4	ಗಿ.ಉ.ಯೋ.	1.05	1.05	0
5	ಸ.ಬಂ.ಅ.ಯೋ	233.55	176.91	56.64
6	ವ.ಘ.ಅ.ಯೋ	322.34	314.30	8.04
7	ಎಸ್.ಜೆ.ಆರ್.ವೈ	205.26	175.96	29.30
8	ಕಾಡಾ	30.11	29.41	0.7
9	ಶರಾವತಿ	0.25	0.25	0
10	ಬರಗಾಲ	73.46	73.45	0.01
	ಒಟ್ಟು	994.15	894.8	99.35

ಈ ವಿವರಗಳನ್ನು ತಾಲ್ಲೂಕುವಾರು ಮತ್ತು ಯೋಜವಾವಾರು ಮಾತ್ರ ತಯಾರಿಸಲಾಗುವುದರಿಂದ ಇವುಗಳನ್ನು ಮಾತ್ರ ಅನುಬಂಧ–1 ರಲ್ಲಿ ನೀಡಲಾಗಿದೆ.

ಇ) ಹೊಸನಗರ ವಿಧಾನ ಸಭಾ ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಲ್ಲಿ (2002–03, 2003–04 ಮತ್ತು 2004–05 ಡಿಸೆಂಬರ್ 2004 ಅಂತ್ಯಕ್ಕೆ) ಕೈಗೊಂಡ ಅಭಿವೃದ್ಧಿ ಕಾಮಗಾರಿಗಳ ಗ್ರಾಮವಾರು, ಫಲಾನುಭವಿವಾರು ಹಾಗೂ ಸರ್ವೆ ನಂಬರುವಾರು ವಿವರಗಳನ್ನು ಅನುಬಂಧ–2, 3, ಮತ್ತು 4 ರಲ್ಲಿ ನೀಡಿದೆ.

ಈ) ಜಿಲ್ಲೆಯಲ್ಲಿ ಈ ಅವಧಿಯಲ್ಲಿ ಕೆಳಕಂಡ ಯೋಜನೆಗಳಡಿ ಜಲಾನಯನ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗಿದೆ.

1) ರಾಷ್ಟ್ರೀಯ ಜಲಾನಯನ ಅಭಿವೃದ್ಧಿ ಯೋಜನೆ
2) ಸಮಗ್ರ ಬಂಜರು ಭೂಮಿ ಅಭಿವೃದ್ಧಿ ಯೋಜನೆ
3) ಪಶ್ಚಿಮಘಟ್ಟ ಅಭಿವೃದ್ಧಿ ಯೋಜನೆ
4) ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆ
5) ವಿಶೇಷ ಘಟಕ ಯೋಜನೆ
6) ಗಿರಿಜನ ಉಪ ಯೋಜನೆ
7) ಕಾಡಾ ಅಭಿವೃದ್ಧಿ ಯೋಜನೆ
8) ಬರ ಪರಿಹಾರ ಯೋಜನೆ
9) ಶರಾವತಿ ಟೇಲ್ ರೇಸ್ ಯೋಜನೆ
10) ಉಪ್ಪು, ಕ್ಷಾರ ಹಾಗೂ ಜೌಗು ಭೂ ಅಭಿವೃದ್ಧಿ ಯೋಜನೆ

2007 (2410): ಶ್ರೀ ಸುನೀಲ್ ವಲ್ಲಾಪುರೆ (ಶಹಾಬಾದ್)– ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಗುಲ್ಬರ್ಗಾ ಹಾಗೂ ಚಿತ್ತಾಪುರ ತಾಲ್ಲೂಕುಗಳ ಆಗ್ರೋ ಕೇಂದ್ರಗಳಿಂದ 2002–03ನೇ ಮತ್ತು 2003–04ನೇ ಸಾಲಿನಲ್ಲಿ ರೈತರಿಗೆ ಸಂಸ್ಕರಣೆ ಮಾಡಿದ ಯಾವ ಯಾವ ತಳಿಯ ಬಿತ್ತನೆ ಬೀಜಗಳನ್ನು ವಿತರಿಸಲಾಗಿದೆ ಹಾಗೂ ರಿಯಾಯಿತಿ ದರಗಳಲ್ಲಿ ವಿತರಿಸಲಾಗಿದೆಯೇ; (ವಿವರ ನೀಡುವುದು);

ಆ) ವಿತರಣೆ ಮಾಡಿದ ಬೀಜಗಳ ಪ್ರಮಾಣವೆಷ್ಟು; ಸಂಸ್ಕರಣೆ ಮಾಡಿದ ಬೇರೆ ಬೇರೆ ಬೀಜಗಳ ದರವೆಷ್ಟು?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು) –

ಅ) 2002–03ನೇ ಸಾಲಿನಲ್ಲಿ ಗುಲ್ಬರ್ಗಾ ಹಾಗೂ ಚಿತ್ತಾಪುರ ತಾಲ್ಲೂಕುಗಳಲ್ಲಿ ಆಗ್ರೋ ಕೇಂದ್ರಗಳು ವಿತರಣೆ ಮಾಡಿದ ಬಿತ್ತನೆ ಬೀಜಗಳ